ಸಾಕ್ಷಿಯನ್ನು ದಿನಾಂಕಃ **23-08-2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ. ಜಿ ಪಿ ಹೆಚ್., ವಕೀಲರಿಂದಃ**

ನಾನು ಈ ನ್ಯಾಯಾಲಯದಲ್ಲಿ ಬೇರೆ ಬೇರೆ ವಿಷಯಗಳ ಕುರಿತು 3-4 ದಾವೆಗಳನ್ನು ಮಾಡಿರುತ್ತೇನೆ, ಸಾಕ್ಷಿಯು ಮುಂದುವರೆದು ಈ ದಾವೆಯನ್ನು ಸೇರಿ 3 ದಾವೆಯನ್ನು ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ದಾವಾ ಮಾಹಿತಿಯನ್ನು ವಕೀಲರಿಗೆ ನಾನೇ ನೀಡಿದ್ದೇನೆ. ನನ್ನ ತಾಯಿಯವರು ಜೀವಂತ ಇರುವಾಗ ಅವರ ಪರವಾಗಿ ನಾನೇ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೆ. ದಾವಾ ಸಂಖ್ಯೆ 171/2019 ಈ ದಾವೆಯಲ್ಲಿ ನಾನು ವಿರುದ್ಧ ಕಬ್ಜಾ ಹಕ್ಕನ್ನು ಕೇಳಿದ್ದೇನೆ. ದಾವಾ ಸಂಖ್ಯೆ 69/2021 ಇದನ್ನು ಸ.ನಂ.1436 ಹಾಗೂ 1437 ಇದರ ಬಗ್ಗೆ ದಾವೆ ಸಲ್ಲಿಸಿದ್ದೇನೆ. ದಾವಾ ಸಂಖ್ಯೆ 69/2021 ರಲ್ಲಿ ಬೇಲಿಯನ್ನು ತೆಗೆಯಬಾರದೆಂದು ಪ್ರತಿವಾದಿಯರ ವಿರುದ್ಧ ಮಾಡಿದ್ದೆನು. ಈ ದಾವೆಯಲ್ಲಿ 7 ಪ್ರತಿವಾದಿಗಳ ವಿರುದ್ಧ ದಾವೆಯನ್ನು ದಾಖಲಿಸಿದ್ದೇನೆ. ಈ ಪ್ರತಿವಾದಿಗಳ ವಿರುದ್ಧ ನನ್ನ ಊರಿನವರಾದ ಶ್ರೀಮತಿ ಮಹಬಲೇಶ್ವರ ಭಟ್ ಹಾಗೂ ಗಣೇಶ ಮಹಬಲೇಶ್ವರ ಭಟ್ ದಾವೆ ದಾಖಲಿಸಿದ್ದಾರೆ. ಸ.ನಂ.1435, 1434, 1485 ಇವುಗಳ ಮೇಲ್ಭಾಗದಲ್ಲಿ ಕುದುಬೈಲ-ಸಂಕೊಳ್ಳಿ ರಸ್ತೆ ಹಾದು ಹೋಗಿದೆ. ಕುದುಬೈಲ-ಸಂಕೊಳ್ಳಿ ರಸ್ತೆ ಶ್ರೀಮತಿಯವರ ಮನೆಯ ಪಕ್ಕದಲ್ಲಿ ಹಾದು ಹೋಗಿದ್ದು, ಆ ರಸ್ತೆಯಿಂದ ಕೆಳಗೆ ಇಳಿದು ಬರಲು ಶ್ರೀಮತಿಯವರ ಜಾಗದಲ್ಲಿ ಮೆಟ್ಟಿಲುಗಳಿವೆ ಎಂದರೆ ಸರಿ. ರಸ್ತೆಯಿಂದ ಕೆಳಗೆ ಇಳಿದು ಬಂದು ಶ್ರೀಮತಿಯವರ ಜಾಗ ದಾಟಿದ ನಂತರ ಒಂದು ಸೇತುವೆ ಇದೆ ಎಂದರೆ ಸರಿಯಲ್ಲ. ಶ್ರೀಮತಿಯವರ ಜಾಗ ದಾಟಿದ ನಂತರ ರೂಪ ನಾಯ್ಕ ಇವರ ಜಾಗ ಸಿಗುತ್ತದೆ. ಶ್ರೀಮತಿಯವರ ಜಾಗ ಹಾಗೂ ರೂಪ ನಾಯ್ಕ ಇವರ ಜಾಗದ ನಡುವೆ ಒಂದು ಹಳ್ಳ ಹರಿದು ಹೋಗಿದೆ ಎಂದರೆ ಸರಿ. ಆ ಹಳ್ಳವು 10 ರಿಂದ 11 ಫೂಟ್ ಅಗಲ ಇರಬಹುದು. ಆ ಹಳ್ಳದಲ್ಲಿ ಮಳೆಗಾಲ ಸಂದರ್ಭದಲ್ಲಿ ನೀರಿರುತ್ತದೆ, ಬೇಸಿಗೆಗಾಲದಲ್ಲಿ ನೀರಿರುವುದಿಲ್ಲ. ಆ ಹಳ್ಳದ ಆಳ ಶ್ರೀಮತಿಯವರ ಜಾಗದ ತಳಪಾತದಿಂದ 3-4 ಫೀಟ್ ಅಡಿ ಇರಬಹುದು. ಶ್ರೀಮತಿಯವರು ರೂಪಾ ಇವರ ಜಾಗಕ್ಕೆ ಹೋಗಲು ಹಳ್ಳ ದಾಟಿಯೇ ಬರಬೇಕೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ರೂಪಾ ಇವರ ಜಾಗಕ್ಕೆ ಹೋಗಲು ಮೇಲಿನ ರಸ್ತೆ ಇದೆ ಎಂದು ನುಡಿದಿರುತ್ತಾರೆ. ಈ ಹಳ್ಳವು ಗೋಟ್ನಳ್ಳಿ ಎನ್ನುವಲ್ಲಿ ರಸ್ತೆಯ ಮಧ್ಯದಲ್ಲಿ ಹಾದು ಹೋಗಿದೆ. ಆ ಹಳ್ಳದ ನಡುವೆ ಒಂದು ಬ್ರಿಡ್ಜ ಇದ್ದು, ಅದಕ್ಕೆ ಪಂಚಾಯ್ತಿಯವರು ಹಣ ವಿನಿಯೋಗಿಸಿದ್ದಾರೆ ಎಂದರೆ ಸರಿಯಲ್ಲ. ಶ್ರೀಮತಿಯವರ ಜಾಗದಿಂದ ಹೊರಟ ಕಾಲುದಾರಿ ಬ್ರಿಡ್ಜಿನ ಮೇಲೆ ಹಾದು ರೂಪಾ ನಾಯ್ಕ ರವರ ಸ್ಥಳವನ್ನು ದಾಟಿ, ನಮ್ಮ ಸ್ಥಳವನ್ನು ದಾಟಿ, ಪ್ರತಿವಾದಿಯವರ ಮನೆಯನ್ನೂ ದಾಟಿ ಹೋಗುತ್ತದೆ ಎಂದರೆ ಸರಿಯಲ್ಲ. ನಮ್ಮ ಜಮೀನಿಗೆ ಯಾವುದೇ ಕಾಲು ದಾರಿ ಇಲ್ಲ. ಆ ಕಾಲುದಾರಿಯಲ್ಲಿ ಪ್ರತಿವಾದಿಯರು ಅನಾದಿಕಾಲದಿಂದ ಹೋಗುತ್ತಿದ್ದಾರೆ ಎಂದರೆ ಸರಿಯಲ್ಲ. ಹಾಗೂ ಅದನ್ನು ತಪ್ಪಿಸಲು ನಾನು ಈ ಸುಳ್ಳು ದಾವೆಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆ ಕಾಲುದಾರಿಯ ಕುರಿತು ರಿಪೇರಿಗೆ ಮತ್ತು ಬೀದಿ ದೀಪ ಹಾಕಲು ಪಂಚಾಯ್ತಿಯವರು ಹಣ ಹಾಕಿದ್ದಾರೆ ಎಂದರೆ ಸರಿಯಲ್ಲ.

ಪಿ ಡಬ್ಲುಃ 1.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**-Sd-**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ..**

**ಹೊನ್ನಾವರ.**